SRUJANI
ISSN: 2583-3510
Indian Journal of Innovative Research and Development (SIJIRD)
Volume-1 (02), May-June 2022, Pp. 65-71
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಸ್ವಾತಂತ್ರ್ಯ ಚಳುವಳಿಯಲ್ಲಿ ವಿಜಯಪುರ ಜಿಲ್ಲೆಯ ಮಹಿಳೆಯರ ಪಾತ್ರ

**ಹಣಮಂತ್ರಾಯ ಆರ್. ಹೊನ್ನಳ್ಳಿ*** **ಮತ್ತು ಡಾ. ಎಸ್. ಕೆ. ಕಲ್ಲೋಳಿಕರ****
*ಸಂಶೋಧನಾ ವಿದ್ಯಾರ್ಥಿ; **ನಿವೃತ ಪ್ರಾಧ್ಯಾಪಕರು
ಇತಿಹಾಸ ಮತ್ತು ಪುರಾತತ್ವ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

***Abstract:***
ಗಾಂಧೀಜಿಯವರ ನೇತೃತ್ವದ ರಾಷ್ಟ್ರೀಯ ಚಳುವಳಿಗೂ ಒಂದು ಶತಮಾನ ಮುಂಚಿತವಾಗಿ 1857ರ ಮಹಾದಂಗೆ ಜರುಗಿದ್ದು, ಈ ಅವಧಿಯಲ್ಲಿ ಝಾನ್ಸಿಯ ರಾಣಿ ಲಕ್ಷ್ಮೀಬಾಯಿ, ಔದ್‌ನ ಬೇಗಂ ಹಜರತ್ ಮಹಲ್, ಕಿತ್ತೂರು ಚೆನ್ನಮ್ಮನಂತಹ ಹಲವಾರು ಮಹಿಳಾ ಮಣಿಗಳು ಭಾಗವಹಿಸಿದ್ದರು. ಅದೇ ರೀತಿ 1919ರಲ್ಲಿ ಗಾಂಧೀಜಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿನ ಪ್ರವೇಶದಿಂದ ಪುರುಷ ಮಹಿಳೆ ಎಂಬ ಭೇದವಿಲ್ಲದೇ ಜನ ಸಾಮಾನ್ಯರು ಮತ್ತು ಮಹಿಳೆಯರ ಸಹಭಾಗಿತ್ವ ಚುರುಕಾಯಿತು. ಇದಕ್ಕೆ ಸಾಕ್ಷಿ ಎಂಬಂತೆ ದಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ದೇಶದ ಮೂಲೆ ಮೂಲೆಯಿಂದ ಆಗಮಿಸಿ ಭಾಗವಿಸಿದ್ದರು. ಈ ಲೇಖನವು ವಿಜಯಪುರ ಜಿಲ್ಲೆಯಲ್ಲಿನ ಭಾರತದ ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸಿದ ಮಹಿಳೆಯರ ಹೋರಾಟದ ಉದ್ದೇಶ, ಇವರ ಕಾರ್ಯವೈಖರಿ, ಇವರ ಮೇಲೆ ಪ್ರಭಾವ ಬೀರಿದ ಪ್ರಮುಖ ಅಂಶಗಳು ಹಾಗೂ ರಾಷ್ಟ್ರೀಯ ಮಟ್ಟದ ಸ್ವಾತಂತ್ರ್ಯ ಚಳುವಳಿಗಳಲ್ಲಿ ಮಹಿಳೆಯರು ಸಕ್ರೀಯವಾಗಿ ನಿರ್ವಹಿಸಿದ ಪಾತ್ರ ಮುಂತಾದವುಗಳನ್ನು ಚರ್ಚಿಸಲಾಗಿದೆ.

***Key Words:*** ಬ್ರಿಟಿಷ್ ಭಾರತ, ವಿಜಯಪುರ, ಸ್ವಾತಂತ್ರ್ಯ ಹೋರಾಟ, ಮಹಿಳೆಯರು, ಸ್ವಾತಂತ್ರ್ಯ ಹೋರಾಟ.

**ಪೀಠಿಕೆ**

ಗಾಂಧೀಜಿಯವರು ತಮ್ಮ ನೇತೃತ್ವದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಸಹಭಾಗಿತ್ವಕ್ಕೆ ಪುರುಷರಷ್ಟೆ ಅವಕಾಶ ನೀಡಿದರು. ಗಾಂಧೀಜಿಯವರು 'ಮಹಿಳೆ ಪುರುಷನಿಗಿಂತಲೂ ಅಹಿಂಸಾ ಮಾರ್ಗದಲ್ಲಿ ದಟ್ಟವಾದ ನಿರ್ಧಾರವನ್ನು ತೆಗೆದುಕೊಳ್ಳಬಲ್ಲಳು. ಆಕೆ ಪುರುಷನಿಗಿಂತ ಕಡಿಮೆ ಎನಿಸುವಂತಹ ಯಾವ ಸಂದರ್ಭಗಳು ಇಲ್ಲ. ಪುರುಷನಷ್ಟೇ ಸಮಾನವಾದ ಮಾನಸಿಕ ಸ್ಥೈರ್ಯವುಳ್ಳವಳು' ಎನ್ನುವುದು ಗಾಂಧೀಜಿಯವರ ಬಲವಾದ ನಂಬಿಕೆಯಾಗಿತ್ತು. ಹಾಗಾಗಿ ಮಹಿಳೆಯರು ಕೂಡ ಭಾರತದ ಸ್ವಾತಂತ್ರ್ಯ ಚಳುವಳಿಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದರು ಮತ್ತು ಭಾಗವಹಿಸುವಿಕೆಗೆ ಅವಕಾಶ ಮಾಡಿಕೊಟ್ಟರು. 1947ರ ಪೂರ್ವದಲ್ಲಿ ಭಾರತವು ಬ್ರಿಟಿಷರ ನಿಯಂತ್ರಣದಲ್ಲಿತ್ತು. ಭಾರತವನ್ನು ಬ್ರಿಟಿಷರ ದಾಸ್ಯದಿಂದ ಮುಕ್ತಗೊಳಿಸಲು ಹಲವಾರು ಜನ ಮಹನೀಯರು ಹೋರಾಡಿದ್ದಾರೆ. ಇಂತಹವರಲ್ಲಿ ಪ್ರಮುಖ ರಾಷ್ಟ್ರೀಯ ನಾಯಕರಾದ ಮಹಾತ್ಮ ಗಾಂಧೀಜಿ, ಜವಾಹರ್ ಲಾಲ್ ನೆಹರು, ಸರ್ದಾರ ವಲ್ಲಬಾಯಿ ಪಟೇಲ್, ಸುಭಾಷ್ ಚಂದ್ರ ಬೋಸ್, ಚಂದ್ರಶೇಖರ ಅಜಾದ್, ಭಗತ್ ಸಿಂಗ್, ಅರವಿಂದ್ ಘೋಷ್, ಬಾಲಗಂಗಾಧರ ತಿಲಕ್, ಲಾಲಾ ಲಜಪತ್‌ರಾಯ್, ಇವರಂತೆ ಸ್ಥಳೀಯ ಮಟ್ಟದಲ್ಲಿ ಹಲವಾರು ಸತ್ಯಾಗ್ರಹಿಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ರಾಷ್ಟ್ರ ವ್ಯಾಪಿಯಾಗಿ ಹಬ್ಬಿರುವ ರಾಷ್ಟ್ರೀಯ ಹೋರಾಟವು ವಿಜಯಪುರ ಜಿಲ್ಲೆಗೆ ಹೊರತಾಗಿರಲಿಲ್ಲ. ವಿಜಯಪುರ ಜಿಲ್ಲೆಯ ಅಂಬಲಿ ಚನ್ನಬಸಪ್ಪ, ಹನುಮಂತರಾಯ ಕೌಜಲಗಿ, ಸಂಗಪ್ಪ ನಾಗಮೋತಿ, ರತನಚಂದ ಜಗಶೆಟ್ಟಿ, ಗಣಪತಿ ದೊಂಡೋ ಗೋಸಾವಿ, ಮಲಕನಗೌಡ ಬಿರಾದಾರ,

*Please cite this article as:* ಹಣಮಂತ್ರಾಯ ಆರ್. ಹೊನ್ನಳ್ಳಿ ಮತ್ತು ಡಾ. ಎಸ್. ಕೆ. ಕಲ್ಲೋಳಿಕರ. (2022). ಸ್ವಾತಂತ್ರ್ಯ ಚಳುವಳಿಯಲ್ಲಿ ವಿಜಯಪುರ ಜಿಲ್ಲೆಯ ಮಹಿಳೆಯರ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(2), 65–71.

ಗದಿಗೆಪ್ಪಾ ಲೋಣಿ, ಗುರುಬಸಪ್ಪ ಪಾವಲೆ, ರಾಚಪ್ಪ ಹೋಳಗಿ, ಮರಲಿಂಗಪ್ಪ ಮಾದರ ಮುಂತಾದವರು ಭಾಗವಹಿಸಿದ್ದರು. ಇವರು ಗಾಂಧೀಜಿಯವರ ಅಹಿಂಸಾ ಹೋರಾಟ ಮತ್ತು ಸುಭಾಷ್ ಚಂದ್ರ ಬೋಸರ ಕ್ರಾಂತಿಕಾರಿ ಚಟುವಟಿಕೆಗಳ ಅಡಿಯಲ್ಲಿ ಕಾರ್ಯಚರಣೆ ಕೈಗೊಂಡು ಸಶಸ್ತ್ರವಾಗಿ ಮತ್ತು ಅಹಿಂಸೆಯ ತಳಹದಿಯಲ್ಲಿ ಸ್ವಾತಂತ್ರ್ಯ ಹೋರಾಟ ಮಾಡುವ ಮೂಲಕ ಯಶಸ್ವಿ ಮಾಡಿದ್ದಾರೆ. ಹೀಗೆ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿ ರಾಷ್ಟ್ರೀಯ ಚಳುವಳಿಯನ್ನು ಯಶಸ್ವಿಗೊಳಿಸಿದವರಲ್ಲಿ ಪುರುಷರಷ್ಟೇ ಸಕ್ರೀಯವಾಗಿ ಭಾಗವಹಿಸಿದ ಮಹಿಳೆಯರು ಕೂಡಾ ರಾಷ್ಟ್ರ ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದರು. ಹಾಗೂ ನಿರಂತರವಾಗಿ ಚಳುವಳಿಗಳಲ್ಲಿ ಭಾಗವಹಿಸುವುದು ಮತ್ತು ಜೈಲುವಾಸ ಅನುಭವಿಸುವುದು ಸತ್ಯಾಗ್ರಹಿಗಳಿಗೆ ಸಾಮಾನ್ಯವಾಗಿತ್ತು.

**ಅಧ್ಯಯನದ ಉದ್ದೇಶಗಳು**

- ರಾಷ್ಟ್ರೀಯ ಚಳುವಳಿಯನ್ನು ಐತಿಹಾಸಿಕ ದೃಷ್ಟಿಕೋನದಲ್ಲಿ ಪರಿಗಣಿಸುವುದು.
- ಸ್ವಾತಂತ್ರ್ಯ ಹೋರಾಟಗಾರರ ಕುರಿತು ಬ್ರಿಟಿಷರ ನೀತಿಯನ್ನು ಸಮೀಕರಿಸುವುದು.
- ರಾಷ್ಟ್ರೀಯ ಚಳುವಳಿಯಲ್ಲಿ ರಾಷ್ಟ್ರೀಯ ಮಟ್ಟದ ನಾಯಕರಂತೆ ಗ್ರಾಮೀಣ ಭಾಗದ ಮಹಿಳೆಯರ ತಮ್ಮ ಸ್ಥಾನವನ್ನು ಆಕ್ರಮಿಸಿಕೊಂಡದ್ದನ್ನು ವಿವರಿಸುವುದು.
- ಹೋರಾಟಗಾರರ ಮೇಲೆ ಸರ್ಕಾರ ಹೇರಿದ ನಿರ್ಭಂಧಕ ಕಾಯ್ದೆಗಳನ್ನು ಚರ್ಚಿಸುವುದು.
- ಸ್ವಾತಂತ್ರ್ಯ ಚಳುವಳಿಗಳಲ್ಲಿ ಮಹಿಳೆಯರ ಸಹಭಾಗಿತ್ವದ ಮೇಲೆ ಐರೋಪ್ಯರ ಪ್ರಭಾವಗಳನ್ನು ಚರ್ಚಿಸುವುದು.
- ಬ್ರಿಟಿಷರ ಅವಧಿಯಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ನಿಯಂತ್ರಿಸಲು ಬ್ರಿಟಿಷರು ಅನುಸರಿಸಿದ ತಂತ್ರಗಳನ್ನು ವಿವರಿಸುವುದು.

**ಅಧ್ಯಯನ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಅನುಷಂಗೀಕ ಆಕರಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಬಾಲ್ಟರ್ನ್ ಇತಿಹಾಸ ಲೇಖನ ಪದ್ಧತಿಯನ್ನು ಬಳಸಿಕೊಳ್ಳಲಾಗಿದೆ.

**ವಿಷಯ ಮಂಡನೆ**

ಗಾಂಧೀಜಿಯವರ ನೇತೃತ್ವದ ರಾಷ್ಟ್ರೀಯ ಚಳುವಳಿಗೂ ಒಂದು ಶತಮಾನ ಮುಂಚಿತವಾಗಿ 1857ರ ಮಹಾದಂಗೆ ಜರುಗಿದ್ದು, ಈ ಅವಧಿಯಲ್ಲಿ ಝಾನ್ಸಿಯ ರಾಣಿ ಲಕ್ಷ್ಮೀಬಾಯಿ, ಔದ್‌ನ ಬೇಗಂ ಹಜರತ್ ಮಹಲ್, ಕಿತ್ತೂರು ಚೆನ್ನಮ್ಮನಂತಹ ಹಲವಾರು ಮಹಿಳಾ ಮಣಿಗಳು ಭಾಗವಹಿಸಿದ್ದರು. ಅದೇ ರೀತಿ ವಿಜಯಪುರ ಜಿಲ್ಲೆಯ ಜೈನಾಪುರ ದೇಸಗತಿಯ ಕಾಶೀಬಾಯಿ ದೇಸಾಯಿಣಿ ಬ್ರಿಟಿಷರ ದರ್ಪದ ವಿರುದ್ಧ ಹೋರಾಡಿದಳು. ಹಾಗೂ 1857ರ ದಂಗೆಯ ಸಮಯದಲ್ಲಿ ಪಡನೂರು ದೇಸಗತಿಯ ರಾಮ ಕೇಶವಾಚಾರ್ಯರ ಮನೆತನವನ್ನು ಕಾಪಾಡಿದವಳು ಒಬ್ಬ ಸಾಮಾನ್ಯ ಮಹಿಳೆಯಾಗಿದ್ದಳು. ಹೀಗೆ 1857ರ ದಂಗೆಯಲ್ಲಿ ಜಿಲ್ಲೆಯ ಮಹಿಳೆಯರ ಸಹಭಾಗಿತ್ವವನ್ನು ಕಾಣಬಹುದಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ ಕಡಿಮೆಯಾಗಿತ್ತು. ಆದರೆ 1919ರಲ್ಲಿ ಗಾಂಧೀಜಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿನ ಪ್ರವೇಶದಿಂದ ಪುರುಷ ಮಹಿಳೆ ಎಂಬ ಭೇದವಿಲ್ಲದೇ ಜನ ಸಾಮಾನ್ಯರು ಮತ್ತು ಮಹಿಳೆಯರ ಸಹಭಾಗಿತ್ವ ಚುರುಕಾಯಿತು. ಇದಕ್ಕೆ ಸಾಕ್ಷಿ ಎಂಬಂತೆ ದಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ದೇಶದ ಮೂಲೆ ಮೂಲೆಯಿಂದ ಆಗಮಿಸಿ ಭಾಗವಿಸಿದ್ದರು. ಹಾಗೂ ಈ ಸತ್ಯಾಗ್ರಹದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯೇ ಹೆಚ್ಚಾಗಿತ್ತು.

**ಹಲಗಲಿಯ ಬೇಡರ ದ್ಯಾಮವ್ವ**

1857ರ ಮಹಾ ದಂಗೆಯಲ್ಲಿ ಭಾರತದ ವಿಜಯಪುರ ಜಿಲ್ಲೆಯ ಹಲಗಲಿಯ ಬೇಡರ ದಂಗೆಯು ಅತೀ ಪ್ರಮುಖ ಸ್ಥಾನವನ್ನು ಪಡೆದಿದೆ. 1857ರ ನವೆಂಬರ್‌ನಲ್ಲಿ ಬ್ರಿಟಿಷರ ಸೇನೆಯು ಹಲಗಲಿಯನ್ನು ಮುತ್ತಿಗೆ ಹಾಕಿ ನವೆಂಬರ್ 30ರಂದು ಸಜೀವ ದಹನ, ದಾರೂಣ ಹತ್ಯೆಯಂತಹ ಕೃತ್ಯಗಳನ್ನು ಅನುಸರಿಸಿತು. ಈ ಅವಧಿಯಲ್ಲಿ ಹುತಾತ್ಮ ಬೇಡರಲ್ಲಿ ಪುರುಷರ ಸಂಖ್ಯೆ ಹೆಚ್ಚಾಗಿದ್ದರೂ ಕೂಡ ಇವರಲ್ಲಿ ದ್ಯಾಮವ್ವ ಎಂಬ ಮಹಿಳೆಯು ಭಾಗವಹಿಸಿ ಹುತಾತ್ಮಳಾದ ಬಗ್ಗೆ ಅಪ್ಪಣ್ಣ ವಗ್ಗರ ಅವರು ತಮ್ಮ ಮುಂಬೈ ಕರ್ನಾಟಕದ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಹೋರಾಟ ಎಂಬ ಸಂಶೋಧನ ಮಹಾ ಪ್ರಬಂಧದ 5ನೇ ಅಧ್ಯಾಯದ 122ನೇ ಪುಟದಲ್ಲಿ ದಾಖಲಿಸಿದ್ದಾರೆ.

**ಪಡನೂರಿನ ಕುರುಬರ ಲಗಮವ್ವ**

ಇಂಡಿ ತಾಲೂಕಿನ ಅಗರಖೇಡ ಬ್ರಾಹ್ಮಣರಿಂದ ಆಳಲ್ಪಡುತಿದ್ದ ಜಹಗೀರಾಗಿತ್ತು. ಅಗರಖೇಡ ಜಹಗೀರು ವಂಶದ ಇನ್ನೊಂದು ಜಹಗೀರು ಪಡನೂರಲ್ಲಿತ್ತು. 1857ರ ಮಹಾದಂಗೆಯ ಅವಧಿಯಲ್ಲಿ ರಾಮ ಕೇಶವಾಚಾರ್ಯ ಎಂಬುವನು ಜಹಗೀರು ಅಧಿಕಾರದ ಗಾದಿಯಲ್ಲಿದ್ದನು. ಇತನು ಸುರಪುರದ ವೆಂಕಟಪ್ಪ ನಾಯಕನಿಗೆ ಸಂಗೊಳ್ಳಿ ರಾಯಣ್ಣನ ಮೂಲಕ ಶಿಫಾರಸ್ಸು ಪತ್ರ ಕಳುಹಿಸಿದ್ದನು[1]. ಹಾಗೂ ಸ್ವಾತಂತ್ರ್ಯ ಹೋರಾಟದ ಬಂಡಾಯಕ್ಕೆ ಪರೋಕ್ಷವಾಗಿ ಸಹಕರಿಸಿದ್ದನು[2]. ಈ ವಿಷಯ ತಿಳಿದ ಬ್ರಿಟಿಷ ಸರ್ಕಾರವು ಪೋಲಿಸರನ್ನು ಕಲೆಕ್ಟರ್ ಸಮೇತವಾಗಿ

ವಿಚಾರಣೆಗೆ ಕಳುಹಿಸಿತು. ಇದೇ ಗ್ರಾಮದ ಕುರುಬರ ಲಗಮವ್ವ ಎಂಬ ಮಹಿಳೆಯು ತನ್ನ ಪ್ರಭಾವವನ್ನು ಬಳಸಿಕೊಂಡು ಧೈರ್ಯದಿಂದ ವಿಚಾರಣೆಗೆ ಬಂದ ಪೋಲಿಸರಿಗೆ ಯಾವುದೇ ಸಾಕ್ಷಿ ದೊರೆಯದಂತೆ ಮಾಡಿದಳು. ಲಗಮವ್ವ ಗ್ರಾಮಸ್ಥರಿಗೆಲ್ಲ 'ಬ್ರಿಟಿಷರ ಎದುರು ಯಾರಾದರೂ ಸಾಕ್ಷಿ ನುಡಿದರೆ ಕೃಷ್ಣದ್ವೈಪಾಯನರ ಶಾಪ ತಟ್ಟುವುದು' ಎಂದು ಹೆದರಿಸವ ಮೂಲಕ ಅಧಿಕಾರಿಗಳಿಗೆ ಸಾಕ್ಷಿ ದೊರೆಯದಂತೆ ಮಾಡಿದ್ದಳು.

ಅಂದಿನ ಕುರುಬರ ಲಗಮವ್ವಳ ಪ್ರಯತ್ನದಿಂದ ಪಡನೂರು ಮತ್ತು ಅಗರಖೇಡ ಜಹಗೀರುಗಳು ಮತ್ತು ಶ್ರೀರಂಗ ಎಂದೇ ಹೆಸರಾದ ಪ್ರಸಿದ್ಧ ನಾಟಕಕಾರರು ಉಳಿದುಕೊಂಡರು. ಈ ಮೂಲಕ ಕನ್ನಡ ಸಾಹಿತ್ಯ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಲಗಮವ್ವಳ ಕೊಡುಗೆ ಅಮೋಘವಾಗಿದೆ. ಹಾಗೂ ವಿಜಯಪುರ ಜಿಲ್ಲೆಯ ವ್ಯಾಪ್ತಿಯಲ್ಲಿನ ದೇಸಗತಿಗಳ ಅಧಿಕಾರದಲ್ಲಿ ಮಹಿಳೆಯರ ಸ್ಥಾನಮಾನವು ಉನ್ನತ ಮಟ್ಟದಲ್ಲಿತ್ತು ಎಂದು ಹೇಳಲು ಈ ಘಟನೆ ಸಾಕ್ಷಿಯಾಗಿದೆ. ಜಿಲ್ಲೆಯ ಜಹಗೀರುದಾರರು ದೌರ್ಜನ್ಯದ ಆಡಳಿತ ಮಾಡುತ್ತಿರಲಿಲ್ಲ ಎಂಬುದನ್ನು ಲಗಮವ್ವಳ ಸಹಕಾರವನ್ನು ಆಧರಿಸಿ ತಿಳಿಯಬಹುದಾಗಿದೆ. ಇಂತಹ ಹಲವಾರು ಮಹಿಳಾ ಹೋರಾಟಗಾರರ ಪರಿಶ್ರಮವು ಭಾರತೀಯ ಮಹಿಳೆಯರಲ್ಲಿ ಸ್ವಾತಂತ್ರ್ಯ ಪರಿಕಲ್ಪನೆಯ ಹುಟ್ಟಿಗೆ ಕಾರಣವಾಯಿತು.

**ಜೈನಾಪುರ ಮನೆತನದ ರಾಜಮಾತೆ ಕಾಶೀಬಾಯಿ ದೇಸಾಯಿಣಿ**

ರಾಣಿ ಚೆನ್ನಮ್ಮಳ ಆಡಳಿತಕ್ಕೆ ಹೋಲಿಸಬಹುದಾದ ಹಲವಾರು ಸಾಮ್ಯತೆಗಳನ್ನು ವಿಜಯಕುಮಾರ ಶೇಕದಾರ್ ಅವರು ಕಾಶೀಬಾಯಿ ದೇಸಾಯಿಣಿ ಆಡಳಿತದಲ್ಲಿ ಗುರುತಿಸುತ್ತಾರೆ. ಜೈನಾಪುರ ದೇಸಾಯಿಗಳ ಕುಟುಂಬದಲ್ಲಿ ಒಂದಾದ ಮೇಲೆ ಒಂದರಂತೆ ಸಾವುಗಳು ಸಂಭವಿಸಿದವು. ಕಾಶೀಬಾಯಿ ದೇಸಾಯಿಣಿಯು ಈ ಘಟನೆಗಳಿಂದ ಭಯಗೊಂಡು ಆಡಳಿತದ ವಾಡೆಯನ್ನು ಜೈನಾಪುರದಿಂದ ವಿಜಯಪುರಕ್ಕೆ ವರ್ಗಾಯಿಸಿದಳು[3]. ವಿಜಯಪುರದಲ್ಲಿ ಬೃಹತ್ ವಾಡೆಯ ನಿರ್ಮಾಣಕ್ಕಾಗಿ 'ಇಟಲಿಯಿಂದ ಉತ್ಕೃಷ್ಟ ದರ್ಜೆಯ ಉದ್ದವಾದ ಕಂಬಗಳನ್ನು ಆಮದು ಮಾಡಿಕೊಂಡಿರಬಹುದು ಎನ್ನಲಾಗಿದೆ[4]. ಇಂದಿಗೂ ಜೈನಾಪುರ ದೇಸಾಯಿಗಳ ವಾಡೆ ವಿಜಯಪುರದಲ್ಲಿ ಸಾಕ್ಷಿಯಾಗಿ ನಿಂತಿದೆ.

ವಿಜಯಪುರದಿಂದ ಹಬ್ಬ–ಹರಿದಿನ, ಜಾತ್ರೆ–ಉತ್ಸವಗಳಿಗೆ ದೇಸಗತ್ತಿಯ ಹಕ್ಕುಗಳನ್ನು ನಿರ್ವಹಿಸಲು ಜೈನಾಪುರಕ್ಕೆ ಹೋಗಿ ಬರಲು ದೂರದ ದಾರಿಯಾಗಿದ್ದರಿಂದ ದೇಸಾಯಿಣಿ ರೋಲ್ಸ್ ರೋಯ್ಸ್ ಕಾರು ಖರೀದಿಸಲು ಮುಂದಾದಳು. ಸಮಕಾಲೀನವಾಗಿ ಮೈಸೂರು ಒಡೆಯರು ಬಿಟ್ಟರೆ ಕರ್ನಾಟಕದ ಯಾವ ಸಂಸ್ಥಾನವಾಗಲಿ ಅಥವಾ ದೇಸಾಯಿಗಳಾಗಲಿ ಇಂತಹ ವೈಭವದ ಕಾರು ಹೊಂದಿರಲಿಲ್ಲ, 1940ರಲ್ಲಿ ದೇಸಾಯಿಣಿ ಕಾರನ್ನು ಖರೀದಿಸಿದಳು. ಇಂತಹ ವೈಭವದ ಕಾರನ್ನು ನೋಡಿ ಬ್ರಿಟಿಷ್ ಅಧಿಕಾರಿ (ವಿಜಯಪುರ ಜಿಲ್ಲೆಯ ಕಲೆಕ್ಟರ್) ನನಗೆ ಇಲ್ಲದ ಅಧಿಕಾರ ಗತ್ತು–ಗಾಂಭಿರ್ಯ ದೇಸಾಯಿಗಳಿಗೆ ಏಕೆ ಎಂಬ ದರ್ಪದಲ್ಲಿ ಕಾರನ್ನು ಕಿತ್ತುಕೊಳ್ಳಲು ಮುಂದಾದನು. ಹಾಗೂ ಸಾರಿಗೆ ಅಧಿಕಾರ ಹೊಂದಿದ್ದ ಕಲೆಕ್ಟರ್‌ನು ಡಾಂಬರು ರಸ್ತೆ ಇಲ್ಲವೆಂಬ (ಕಾರು ಕಂಪನಿಯ ನಿಯಮದಂತೆ) ನೆಪವೊಡ್ಡಿ ಕಾರನ್ನು ರಸ್ತೆಗೆ ಇಳಿಯದಂತೆ ನಿಷೇದಾಜ್ಞೆ ಹೇರಿಸಿದನು. ಅಲ್ಲದೇ ಕಾರಿನ ಪರವಾನಗಿಯನ್ನು ರದ್ದು ಮಾಡಿದನು[5]. ತನ್ನ ಪ್ರತಿಷ್ಠೆ ಮತ್ತು ಗೌರವ ಸಾಮಾನ್ಯ ಜನರ ದೃಷ್ಟಿಯಲ್ಲಿ ಕಡಿಮೆಯಾಗಬಾರದು ಎಂಬ ಕಾರಣಕ್ಕೆ ಕಾರನ್ನು ಬ್ರಿಟಿಷರಿಗೆ (ಕಲೆಕ್ಟರ್‌ನಿಗೆ) ನೀಡಲು ಒಪ್ಪಲಿಲ್ಲ. ಆದರೆ ಕಲೆಕ್ಟರ್‌ನು ಅಧಿಕಾರದಿಂದಲಾದರೂ ಕಾರನ್ನು ಪಡೆಯಲು ಮುಂದಾಗಿ ವಿಫಲನಾದನು. ವಾಡೆಯ ಮುಂದೆ ನಿಂತ ರೋಲ್ಸ್ ರೊಯ್ಸ್ ಕಾರಿಗೆ ದೇಸಾಯಿಣಿ ಕುಳ್ಳು (ಉಪಲಿ) ಹಚ್ಚಿಸಿದಳೇ ಹೊರತು ಬ್ರಿಟಿಷ್ ಅಧಿಕಾರಿಗೆ ನೀಡಲಿಲ್ಲ.

1958ರಲ್ಲಿ ಕಾಶೀಬಾಯಿ ಮರಣದ ನಂತರ ದೇಸಾಯಿಯ ಅಧಿಕಾರಕ್ಕಾಗಿ ಆಂತರಿಕ ಕಲಹಗಳು ಏರ್ಪಟ್ಟವು. ಈ ವಿಷಯ ನ್ಯಾಯಾಲಯದ ಮೆಟ್ಟಿಲೇರಿತು ಮತ್ತು ಕೆಲವು ವರ್ಷಗಳ ಕಾಲ ವಾಡೆಯು ಕಲೆಕ್ಟರ್ ಅಧಿಕಾರಕ್ಕೆ ಒಳಪಟ್ಟಿತು. ಅಂತಿಮವಾಗಿ ಸುಪ್ರೀಂ ಕೋರ್ಟ್‌ನ ತೀರ್ಪಿನಂತೆ ಜೈನಾಪುರ ದೇಸಗತಿ ವಂಶಸ್ಥರಿಗೆಲ್ಲರಿಗೂ ಆಸ್ತಿಯ ಮೇಲೆ ಸಮಾನ ಅಧಿಕಾರವಿದೆ ಎಂದು ಘೋಷಿಸಲಾಯಿತು.

ಹೀಗೆ ಜೈನಾಪುರ ದೇಸಾಯಿಣಿ ಕಾಶೀಬಾಯಿಯು ದೇಶಿಯ ಪರಾಕ್ರಮ, ಸ್ವಾತಂತ್ರ್ಯ, ಪ್ರತಿಷ್ಠೆಯ ಪ್ರತೀಕವಾಗಿ ಬ್ರಿಟಿಷರ ದೌರ್ಜನ್ಯ ದರ್ಪದ ವಿರುದ್ಧ ತಮ್ಮ ಅಧಿಕಾರ ಚಲಾಯಿಸಿ ಕಾರಿಗೆ ಕುಳ್ಳು ಬಡೆದದ್ದನ್ನು ಕಾಣಬಹುದಾಗಿದೆ. ಇದರಿಂದಾಗಿ ದೇಸಾಯಿ ಮನೆತನದ ಮಹಿಳೆಯರು ಆತ್ಮಾಭಿಮಾನ, ಸ್ವಾಭಿಮಾನಕ್ಕೆ ದಕ್ಕೆಯಾಗುವಂತಹ ಯಾವುದೇ ವಿಷಯವನ್ನು ಸಹಿಸಿಕೊಳ್ಳದೇ ತೀವ್ರವಾಗಿ ಪ್ರತಿರೋಧಿಸುತಿದ್ದರು. ವಿಜಯಪುರ ಜಿಲ್ಲೆಯ ಜೈನಾಪುರ ದೇಸಾಯಿಣಿ ಕಾಶೀಬಾಯಿಯನ್ನು ಸಾಕ್ಷಿಯಾಗಿ ಕಾಣಬಹುದಾಗಿದೆ.

**ಪಕೀರವ್ವ ಹಂಪಿಹೋಳಿ**

1923ರ ನಾಗಪೂರ ಧ್ವಜ ಸತ್ಯಾಗ್ರಹ ಕರೆಗೆ ತಕ್ಷಣದಲ್ಲಿ ಪ್ರತಿಕ್ರಿಯಿಸಿದ ವಿಜಯಪುರ ಜಿಲ್ಲೆಯಲ್ಲಿ ಗುಳೇದಗುಡ್ಡ, ಕೆರೂರು, ಚೋಳಚಗುಡ್ಡ, ಚಡಚಣ, ವಿಜಯಪುರ, ಸಿಂದಗಿ, ಮುದ್ದೇಬಿಹಾಳ ಮುಂತಾದ ಪ್ರದೇಶಗಳಲ್ಲಿ ಸರ್ಕಾರಿ ಕಛೇರಿಗಳ ಮುಂದೆ ರಾಷ್ಟ್ರೀಯ ಧ್ವಜ ಹಾರಿಸಿ ಸತ್ಯಾಗ್ರಹ

ಆಚರಿಸಿದರು. ಗುಳೇದಗುಡ್ಡ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದ ಪಕೀರವ್ವ ಇಲ್ಲಿನ ಮುನ್ಸಿಪಾಲಿಟಿಯ ಕಛೇರಿಯ ಮೇಲೆ ರಾಷ್ಟ್ರೀಯ ಧ್ವಜ ಹಾರಿಸಿ ಪೋಲಿಸರ ಕಟ್ಟುನಿಟ್ಟಿನ ಕಣ್ಗಾವಲಿಗೆ ಒಳಪಟ್ಟರು[6]. ಗುಳೇದಗುಡ್ಡದಲ್ಲಿನ ಧ್ವಜ ಸತ್ಯಾಗ್ರಹದ ಪರಿಣಾಮವಾಗಿ ಗುಳೇದಗುಡ್ಡ ಮತ್ತು ಕೆರೂರುಗಳಲ್ಲಿನ ಸತ್ಯಾಗ್ರಹಿಗಳನ್ನು ಬಂಧಿಸಿ ಜೈಲಿಗೆ ತಳ್ಳಿದರು. ನಂತರ ಭೂಗತ ಚಳುವಳಿಗಳಲ್ಲಿ ಭಾಗವಹಿಸಿದ ಪಕೀರವ್ವ ಅವರು 4 ತಿಂಗಳ ಜೈಲು ಶಿಕ್ಷೆ ಅನುಭವಿಸಿದರು[7]. ಇಂದಿಗೂ ಈ ಪ್ರದೇಶದಲ್ಲಿ ಪಕೀರವ್ವ ಅವರ ತ್ಯಾಗ, ರಾಷ್ಟ್ರ ಸೇವೆ ಸ್ಮರಣೀಯವಾಗಿದೆ.

**ವೆಂಕೂಬಾಯಿ ಪಾರ್ವತಿ**

1942ರ ಗಾಂಧೀಜಿಯವರು 'ಭಾರತ ಬಿಟ್ಟು ತೊಲಗಿ' ಎಂದು ಘೋಷಣೆಯ ಮೂಲಕ ಚಳುವಳಿಯನ್ನು ಪ್ರಾರಂಭಿಸಿದರು. 1920ರ ಅಸಹಕಾರ ಚಳುವಳಿ ಮತ್ತು ದಂಡಿ ಉಪ್ಪಿನ ಸತ್ಯಾಗ್ರಹದಿಂದ ಹೆಚ್ಚಿನ ಸಂಖ್ಯೆಯ ಜನಸಾಮಾನ್ಯರ ಸಹಭಾಗಿತ್ವ ಪಡೆಯುವ ಮೂಲಕ ರಾಷ್ಟ್ರ ವ್ಯಾಪಿಯಾಗಿ ಅನುಯಾಯಿಗಳನ್ನು ಗಾಂಧೀಜಿಯವರು ಹೊಂದಿದ್ದರು. ಇದಕ್ಕೆ ವಿಜಯಪುರ ಜಿಲ್ಲೆ ಹೊರತಾಗಿರಲಿಲ್ಲ. ಈ ಅನುಯಾಯಿಗಳಲ್ಲಿ ಪುರುಷ ಮಹಿಳೆ ಎಂಬ ಭೇದಭಾವ ಇರಲಿಲ್ಲ. ವಿಜಯಪುರ ಜಿಲ್ಲೆಯಲ್ಲಿನ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮಹಿಳೆಯರು ಭಾಗವಹಿಸಿದ್ದರು.

1942ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿದ್ದ ಬಾಗಲಕೋಟೆ ತಾಲೂಕಿನ ಪ್ರಮುಖ ಮಹಿಳಾ ನಾಯಕಿಯಾಗಿ ವೆಂಕೂಬಾಯಿ ಪಾರ್ವತಿಯವರು ಇತರ ಚಳುವಳಿಕಾರರಿಗೆ ಸಹಕರಿಸುತ್ತಾ ಅವಶ್ಯಕತೆಗಳನ್ನು ಪೂರೈಸುತಿದ್ದರು. ಇವರು ಅಂಬಲಿ ಚನ್ನಬಸಪ್ಪ, ಎಸ್.ಆರ್. ಕಂಠಿ, ಶ್ರೀನಿವಾಸರಾವ್ ಮಂಗಳವೇಡೆ, ಸಿದ್ದಪ್ಪ ಅಕ್ಕಿ, ಲಿಂಗಯ್ಯ ಜಂಗಿನ ಮುಂತಾದ ಜಿಲ್ಲೆಯ ಪ್ರಮುಖ ನಾಯಕರ ಜೊತೆಗೆ ಚಳುವಳಿಗಳಲ್ಲಿ ಭಾಗವಹಿಸಿದ್ದರು. ಬಾಗಲಕೋಟೆ ತಾಲೂಕಿನ ಕ್ವಿಟ್ ಇಂಡಿಯಾ ಚಳುವಳಿಯ ಮಹಿಳಾ ನಾಯಕತ್ವವನ್ನು ವೆಂಕೂಬಾಯಿ ಪಾರ್ವತಿ, ಬಿ.ಎಸ್. ಕಿರೆಸೂರು, ಸುಬಧ್ರಾಬಾಯಿ ಬುರ್ಲಿ ವಹಿಸಿಕೊಂಡಿದ್ದರು. ವಿಜಯಪುರ ಜಿಲ್ಲೆಯಿಂದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಒಟ್ಟು 250ಕ್ಕೂ ಹೆಚ್ಚು ಜನ ಚಳುವಳಿಕಾರರು ಭಾಗವಹಿಸಿ ಬಂಧಿತರಾಗಿದ್ದರು[8]. ಇದು ವಿಜಯಪುರ ಜಿಲ್ಲೆಯಲ್ಲಿನ ಕ್ವಿಟ್ ಚಳುವಳಿಯ ವ್ಯಾಪಕತೆ ಹಾಗೂ ಪರಿಣಾಮವನ್ನು ವಿವರಿಸುತ್ತದೆ. ರಾಜಕೀಯ ಪರಿಷತ್ತಿನಿಂದ ಪ್ರೇರಿತರಾಗಿ 1931–32ರ ಕಾನೂನು ಭಂಗ ಚಳುವಳಿಯ ಭಾಗವಾಗಿ ಕರ ನಿರಾಕರಣೆ, ಸಾರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಆಚರಿಸುತಿದ್ದರು. ಆಗ ಪೋಲಿಸರಿಂದ ಬಂಧಿತರಾಗಿ 4 ತಿಂಗಳ ಜೈಲು ವಾಸ ಅನುಭವಿಸಿದರು[18]. ಬಾಗಲಕೋಟೆಯಲ್ಲಿ ಹೀಗೆ ಒಂದು ತಂಡದ ನಂತರ ಮತ್ತೊಂದು ತಂಡ ಚಳುವಳಿಯನ್ನು ಆಚರಿಸಿ ಪೋಲಿಸರಿಂದ ಬಂಧಿಸಲ್ಪಡುತಿತ್ತು.

ಬಾಗಲಕೋಟೆ ತಾಲೂಕಿನಿಂದ ಚಂಪಾಬಾಯಿ, ವೆಂಕವ್ವಾ ಕಾಟಾಪುರ, ವೆಂಕೂಬಾಯಿ ಪಾರ್ವತಿ, ಸುಭದ್ರಾಬಾಯಿ ಮುಂತಾದ ಪ್ರಮುಖ ಮಹಿಳಾ ಹೋರಾಟಗಾರರಾಗಿದ್ದರು. ಇವರು ರಾ.ಹ. ಪುರೋಹಿತ, ಎಸ್.ಆರ್.ಕಂಠಿ, ಸವಣೂರು, ಸುಗುಣಾಚಾರ್ಯ, ಕಾಖಂಡಕಿ ರಾಮಾಚಾರ್ಯ, ಸುಬ್ಬಣಾಚಾರ್ಯ ಮುಂತಾದ ಪ್ರಮುಖ ನಾಯಕರ ಜೊತೆ ಸೇರಿ ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸಿದ್ದರು. ಇವರ ತ್ಯಾಗ, ಸೇವೆಗಳು ರಾಷ್ಟ್ರೀಯ ಚಳುವಳಿಯಲ್ಲಿ ಮರೆಯಲಾಗದ ಘಟನೆಗಳನ್ನು ಸೃಷ್ಟಿಸಿವೆ. ಒಟ್ಟಾರೆಯಾಗಿ ಬಾಗಕೋಟೆ ತಾಲೂಕಿನ ಮಹಿಳೆಯರ ಹೋರಾಟವು ಭಾರತವು ಸ್ವಾತಂತ್ರ್ಯ ಪಡೆಯಲು ಒಂದು ಮೈಲಿಗಲ್ಲನ್ನು ಸೃಷ್ಟಿಸಿತು.

**ಚನ್ನಬಸಪ್ಪ ಅಂಬಲಿಯವರ ಕುಟುಂಬದ ಪಾತ್ರ**

ಅಂಬಲಿ ಚನ್ನಬಸಪ್ಪನವರ ಪೂರ್ತಿ ಪರಿವಾರವೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿತ್ತು. ಅಂಬಲಿ ಕುಟುಂಬವು 1916ರ ಹೋಂರೂಲ್ ಚಳುವಳಿ ಹಾಗೂ ಸ್ವದೇಶಿ ಚಳುವಳಿಗಳಲ್ಲಿ ಭಾಗವಹಿಸಿತ್ತು. ಅಂಬಲಿ ಪರಿವಾರವು 1919ರ ರೌಲತ್ ಕಾಯ್ದೆ ವಿರೋಧಿ ಹೋರಾಟ ಹಾಗೂ 1927–28ರ ಸೈಮನ್ ಕಮೀಶನ್ ವಿರೋಧಿ ಹೋರಾಟಗಳಲ್ಲಿ ಭಾಗವಹಿಸಿ ವಿಜಯಪುರದಲ್ಲಿ ಪೋಲಿಸರ ಹದ್ದುಬಸ್ತಿಗೆ ಒಳಗಾದರು[9]. ಹಾಗೂ ನಿರಂತರ ಸತ್ಯಾಗ್ರಹಗಳಲ್ಲಿ ಭಾಗವಹಿಸುತಿದ್ದ ಅಂಬಲಿ ಪರಿವಾರವನ್ನು ಪೋಲಿಸರು ವಿಜಯಪರವನ್ನು ತೊರೆಯುವಂತೆ ಕಿರುಕುಳ ನೀಡಿದರು. ಇದರಿಂದಾಗಿ ಅಂಬಲಿ ಕುಟುಂಬವು ವಿಜಯಪುರವನ್ನು ಬಿಟ್ಟು ಸೊಲ್ಲಾಪುರಕ್ಕೆ ಬಂದು ನೆಲೆಸಿತು. ಇಲ್ಲಿ ಇವರು ಜೀವನಕ್ಕಾಗಿ ಹಾಗೂ ದಿನದ ಊಟಕ್ಕಾಗಿ ದಿನಗೂಲಿ ಮಾಡಿ ಜೀವನ ಸಾಗಿಸಿದರು.

ಅಂಬಲಿ ಪರಿವಾರವು ಜನ್ಮಸ್ಥಳದಿಂದ (ವಿಜಯಪುರದಿಂದ) ದೂರವಿತ್ತೆ ವಿನಃ ಸ್ವಾತಂತ್ರ್ಯ ಚಳುವಳಿಗಳಿಂದ ದೂರವಿರಲಿಲ್ಲ. ಚನ್ನಬಸಪ್ಪನವರ ಕಿರಿಯ ಸಹೋದರ ಅಡಿವೆಪ್ಪ ಅಂಬಲಿ ಸೊಲ್ಲಾಪುರದಲ್ಲಿ ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಿದರು. ಹಾಗೂ ಸಾರಾಯಿ ಅಂಗಡಿಗಳ ಎದುರು ಪಿಕೆಟಿಂಗ್ ಆಚರಿಸಿದರು[10]. ಸೊಲ್ಲಾಪುರದಲ್ಲಿನ ರಾಷ್ಟ್ರೀಯ ಚಳುವಳಿಯು ಚುರುಕುಗೊಂಡಿದ್ದನ್ನು ಅರಿತ ಬ್ರಿಟಿಷ್ ಸರ್ಕಾರವು ಮಾರ್ಷಲ್ (ಲಷ್ಕರಿ) ಕಾನೂನು ಜಾರಿಗೆ ತಂದಿತು. ಇದರಿಂದ ಅಂಬಲಿ ಪರಿವಾರಕ್ಕೆ ಸೊಲ್ಲಾಪುರದಲ್ಲಿಯ ಜೀವನವು ದುಸ್ತರವಾಯಿತು. ಆಗ ಹೆಸರು ಮತ್ತ ವಿಳಾಸ

ಬದಲಿಸಿಕೊಂಡು ಪುನಃ ವಿಜಯಪುರಕ್ಕೆ ಬಂದು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದರು.

1942ರ ಚಲೇಜಾವ್ ಚಳುವಳಿ ಹಾಗೂ ಭೂಗತ ಚಳುವಳಿಗಳಲ್ಲಿ ಅಂಬಲಿ ಕುಟುಂಬವು ಸಕ್ರೀಯವಾಗಿ ಭಾಗವಹಿಸಿತ್ತು. ಅಂಬಲಿ ಮನೆತನದ ಸೊಸೆಯಂದಿರಾದ ರಾಮವ್ವ ಮತ್ತು ಗಂಗವ್ವ (ಗಂಗೂಬಾಯಿ) ಇಬ್ಬರು ಜಿಲ್ಲೆಯಲ್ಲಿ ಜರುಗಿದ ರಾಷ್ಟ್ರೀಯ ಚಳುವಳಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

**ರಾಮವ್ವ ಅಂಬಲಿ**

ಚನ್ನಬಸಪ್ಪ ಅಂಬಲಿಯವರ ಹಿರಿಯಣ್ಣ ಗುರುಲಿಂಗಪ್ಪನವರ ಪತ್ನಿ ರಾಮವ್ವ ಅಂಬಲಿಯವರು. ಇವರು ಮದುವೆಯಾಗಿ ಹೊಸದಾಗಿ ಮನೆಗೆ ಬಂದಿದ್ದರು, ಆಗ ರೌಲತ್ ಕಾಯ್ದೆ ವಿರೋಧಿ ಚಳುವಳಿಯ ಕರ ಪತ್ರಗಳಿಗೆ ಚನ್ನಬಸಪ್ಪನವರು ಆರ್ಥಿಕ ಸಮಸ್ಯೆ ಎದುರಿಸುತಿದ್ದರು. ಇದನ್ನು ಅರಿತ ರಾಮವ್ವ ಅಂಬಲಿಯವರು ತನ್ನ ಮೈಮೇಲಿನ 10 ತೊಲಿ (100 ಗ್ರಾಂ.) ಬಂಗಾರವನ್ನು ಏನನ್ನೂ ಯೋಚಿಸದೇ ದಾರಾಳವಾಗಿ ಬಿಚ್ಚಿ ಕೊಟ್ಟರು. ಅಲ್ಲದೇ ಚನ್ನಬಸಪ್ಪ ಅಂಬಲಿಯವರ ಜೊತೆಗೆ ರೌಲತ್ ಕಾಯ್ದೆ ವಿರೋಧಿ ಚಳುವಳಿಯಲ್ಲಿ ಭಾಗವಹಿಸಿದ್ದರು. ಹಾಗೂ 1927–28ರ ಸೈಮನ್ ಕಾಯ್ದೆ ವಿರೋಧಿ ಚಳುವಳಿಯಲ್ಲಿ ಭಾಗವಹಿಸಿ ವಿಜಯಪುರದಲ್ಲಿ ಪೋಲಿಸರ ಹದ್ದುಬಸ್ತಿಗೆ ಒಳಪಟ್ಟರು. ಸೊಲ್ಲಾಪುರದಲ್ಲಿ ಕರ ನಿರಾಕರಣೆ ಮತ್ತು ಸಾರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಆಚರಿಸಿದರು.

ಸೊಲ್ಲಾಪುರದಿಂದ ಮರಳಿ ಬಂದ ಮೇಲೆ 1932ರ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾಗಿ 1 ವರ್ಷ 3 ತಿಂಗಳ ಯರವಾಡ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು[11]. 1942ರ ಚಲೇಜಾವ್ ಚಳುವಳಿಯ ಭಾಗವಾಗಿ ಭೂಗತರಾಗಿ ಮಿಂಚನಾಳ ರೈಲು ಹಳಿ ಕಿತ್ತು ಹಾಕುವ, ಅಂಚೆ ಪತ್ರಗಳನ್ನು ಕಳ್ಳತನ ಮಾಡುವುದು ಹಾಗೂ ಸರ್ಕಾರಿ ಕಛೇರಿಗಳಿಗೆ ಬೆಂಕಿ ಹಚ್ಚುವಂತಹ ಕ್ರಾಂತಿಕಾರ ಚಟುವಟಿಕೆಗಳಲ್ಲಿ ತೊಡಗಿದ್ದರು.

**ಗಂಗೂಬಾಯಿ ಅಂಬಲಿ**

ಅಂಬಲಿ ಚನ್ನಬಸಪ್ಪನವರ ಪತ್ನಿ ಗಂಗವ್ವ (ಗಂಗೂಬಾಯಿ) ತಮ್ಮ ಪತಿಯ ಜೊತೆ ರಾಷ್ಟ್ರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರು 1927–28ರ ಸೈಮನ್ ಕಮೀಶನ್ ವಿರೋಧಿ ಚಳುವಳಿಯಲ್ಲಿ ಮೊದಲ ಬಾರಿಗೆ ಭಾಗವಹಿಸುವ ಮೂಲಕ ರಾಷ್ಟ್ರೀಯ ಚಳುವಳಿಗೆ ಧುಮುಕಿದರು. ಕುಟುಂಬದ ಜೊತೆಗೆ ಇವರು ಕೂಡಾ ಪೋಲಿಸರ ಹದ್ದುಬಸ್ತಿಗೆ ಒಳಗಾಗಿ ವಿಜಯಪುರದಿಂದ ಸೊಲ್ಲಾಪುರಕ್ಕೆ ಬಂದು ಇಲ್ಲಿಯೂ ಸ್ವಾತಂತ್ರ್ಯ ಚಳುವಳಿಯನ್ನು ಬಿಡದೇ, ಕಾನೂನು ಭಂಗ ಚಳುವಳಿಯನ್ನು ಆಚರಿಸಿದರು. ಮಾರ್ಷಲ್ ಕಾನೂನಿನ ಕ್ರೂರ ಶಿಕ್ಷೆಗಳಿಗೆ ಹೆದರಿ ಮರಳಿ ವಿಜಯಪುರಕ್ಕೆ ಬಂದರು. 1932ರ ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದ ಭಾಗವಗಿ ಕರ ನಿರಾಕರಣ ಚಳುವಳಿ ಆಚರಿಸಿ ಬಂಧಿತರಾಗಿ 1 ವರ್ಷ 8 ತಿಂಗಳು ಕಾಲ ಯರವಾಡ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು[12]. ಇದೇ ಅವಧಿಯಲ್ಲಿ ಹಿಂದಿ ಮತ್ತು ಮರಾಠಿ ಭಾಷೆಗಳನ್ನು ಕಲಿತುಕೊಂಡರು. ಗಂಗೂಬಾಯಿ ಅವರು 1932ರಲ್ಲಿ ಗಾಂಧೀಜಿಯವರು ಕೈಗೊಂಡ ಉಪವಾಸ ಸತ್ಯಾಗ್ರಹಕ್ಕೆ ಪ್ರತಿಯಾಗಿ 21 ದಿನಗಳ ಕಾಲ ಉಪವಾಸ ಆಚರಿಸಿದರು[13]. 1942ರ ಚಲೇಜಾವ್ ಚಳುವಳಿಯಲ್ಲಿ ಭೂಗತರಾಗಿ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಹಾಗೂ ಗಾಂಧೀಜಿಯವರ ಆದೇಶದಂತೆ ಪೋಲಿಸರಿಗೆ ಶರಣಾಗತರಾದರು.

ಹೀಗೆ ಅಂಬಲಿ ಪರಿವಾರದ ಪ್ರತಿಯೊಬ್ಬರು ಪುರುಷ–ಮಹಿಳೆಯರು ಸ್ವಾತಂತ್ರ್ಯ ಚಳುವಳಿಯಲ್ಲಿ ನಿರಂತರವಾಗಿ ಭಾಗವಹಿಸಿ ಪೋಲಿಸರ ಕಿರುಕುಳ, ದೌರ್ಜನ್ಯ ಹಾಗೂ ದಸ್ತಗಿರಿಗೆ ಒಳಗಾದರು. ಜೈಲು ವಾಸ ಅನುಭವಿಸಿದರು. ಹೀಗೆ ಅಂಬಲಿ ಪರಿವಾರವು ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿದ ತ್ಯಾಗ, ಸೇವೆ, ಅನುಭವಿಸಿದ ಕಷ್ಟಗಳು ಅವಿಸ್ಮರಣೀಯವಾಗಿದೆ.

**ಪದ್ಮಾವತಿಬಾಯಿ ಬಿದರಿ**

ಸ್ವತಂತ್ರ ಹೋರಾಟಗಾರರಾದ ವಾಮನ್‌ರಾವ್ ಬಿದರಿ ಅವರ ಪತ್ನಿಯವರಾದ ಪದ್ಮಾವತಿಬಾಯಿ ತಮ್ಮ ಪತಿಯೊಂದಿಗೆ ಚಳುವಳಿಗಳಲ್ಲಿ ಸ್ವತಃ ಭಾಗವಹಿಸಿದ್ದರು. ಪದ್ಮಾವತಿಬಾಯಿ ಮನೆಗೆ ಬರುತಿದ್ದ ಪೋಲಿಸರಿಗೆ ಬಿದರಿಯವರನ್ನು ಸಿಗದಂತೆ ಬಚ್ಚಿಡುವುದು ಹಾಗೂ ಕೆಲವೊಮ್ಮೆ ಪರಾರಿ ಮಾಡುತಿದ್ದರು.

1942ರ ಚಲೇಜಾವ್ ಚಳುವಳಿಯಲ್ಲಿ ಭೂಗತರಾಗಿದ್ದ ವಾಮನ್‌ರಾವ್ ಬಿದರಿಯವರು ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗಿದ್ದರೆ, ಪತ್ನಿ ಪದ್ಮಾವತಿಬಾಯಿ ಪತಿ ಬಿದರಿಯವರ ಬದಲಿಗೆ ಜೈಲು ವಾಸಕ್ಕೊಳಗಾಗಿದ್ದರು[14]. ಬಿದರಿಯವರು ಸಿಗುವವರೆಗೂ ಪದ್ಮಾವತಿಯವರನ್ನು ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿರಿಸಿದ್ದರು. ಗಣಪತಿಥೊಂಡೋ ಗೋಸಾವಿಯವರು ಸ್ವಯಂ ಜಾಮೀನಿನ ಮೇಲೆ ಪದ್ಮಾವತಿ ಅವರನ್ನು ಬಿಡುಗಡೆ ಮಾಡಿ ಅವರ ಮಕ್ಕಳನ್ನು ಸಹ ಸಂರಕ್ಷಿಸಿದರು. ಆದರೆ ಬಿದರಿಯವರನ್ನು ಹುಡುಕಿಕೊಂಡು ಗೋಸಾವಿಯವರ ಮನೆಗೆ ಬಂದ ಪೋಲಿಸರು ಪುನಃ ಪದ್ಮಾವತಿಯವರನ್ನು ಬಂಧಿಸಿದರು. 1944ರ ಅಗಷ್ಟ್‌ನಲ್ಲಿ ಬೆಳಗಾವಿಯ ಕಾಂಗ್ರೆಸ್ ಭವನದಲ್ಲಿ ಸಭೆ ಸೇರಿ ಜೈಲು ಶಿಕ್ಷೆಗೆ ಒಳಗಾದವರನ್ನು ಬಂಧನದಿಂದ ಮುಕ್ತಗೊಳಿಸಲಾಯಿತು.

ಹೀಗೆ ಬಿದರಿಯವರ ಕುಟುಂಬವು ರಾಷ್ಟ್ರೀಯ ಚಳುವಳಿಗಾಗಿ ತಮ್ಮ ಸುಖ, ಶಾಂತಿ, ನೆಮ್ಮದಿಯನ್ನು ತ್ಯಾಗ ಮಾಡಿ ಭಾರತವನ್ನು ಬ್ರಿಟಿಷರಿಂದ ಮುಕ್ತಗೊಳಿಸುವಲ್ಲಿ ಅಗಾಧ ಸೇವೆ ನೀಡಿದ್ದಾರೆ.

**ಚಡಚಣ ಗ್ರಾಮದ ಮಹಿಳಾ ಚಳುವಳಿಕಾರರು**

ವಿಜಯಪುರ ಜಿಲ್ಲೆಯಲ್ಲಿ ಅತೀ ಹೆಚ್ಚು ಸ್ವಯಂ ಸೇವಕರನ್ನು ನೀಡಿದ ಕಿರ್ತಿ ಚಡಚಣ ಗ್ರಾಮಕ್ಕೆ ಸಲ್ಲುತ್ತದೆ[15]. ಚಡಚಣ ಗ್ರಾಮದಿಂದ ಪ್ರತೀ ದಿನ ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಲು 90 ಜನರ ಒಂದು ಗುಂಪು ಬೇರೆ ಬೇರೆ ಹೆಸರುಗಳನ್ನು ಹೇಳಿಕೊಂಡು ವಿಜಯಪುರಕ್ಕೆ ಹೋಗಿ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರುತಿದ್ದರು. ಹೀಗೆ ಚಳುವಳಿಯಲ್ಲಿ ಭಾಗವಹಿಸುವವರಲ್ಲಿ ಗಂಡು–ಹೆಣ್ಣು ಎಂಬ ಭೇದವಿಲ್ಲದೇ ಭಾಗವಹಿಸುತಿದ್ದರು. ಗ್ರಾಮದ ಜನರು 'ಸರ್ಕಾರಕ್ಕೆ ಹೊಲದ ತೆರಿಗೆ ಕೊಡಬೇಡಿ. ಬ್ರಿಟಿಷರನ್ನು ದೇಶದಿಂದ ಹೊರದೂಡಿ, ಅವರು ಮಹಾದುಷ್ಟರು. ನಮ್ಮ ದೇಶವನ್ನು ನಮಗೆ ಬಿಟ್ಟು ಕೊಡಲು ನಿರಾಕರಿಸುತ್ತಾರೆ. ಎಂಬ ಘೋಷಣೆಗಳನ್ನು ಕೂಗುತ್ತಾ ಮಹಿಳಾ ಹೋರಾಟಗಾರರು ಕರ ನಿರಾಕರಣ ಚಳುವಳಿಯಲ್ಲಿ ಭಾಗವಹಿಸಿದ್ದರು.

**ಬಾಗಲಕೋಟೆಯ ಮಹಿಳಾ ಹೋರಾಟಗಾರರು**

1928ರ 6ನೇ ಕರ್ನಾಟಕ ಪ್ರಾದೇಶಿಕ ರಾಜಕೀಯ ಪರಿಷತ್ತು ಸಮ್ಮೇಳನಕ್ಕೆ ಎಲ್ಲಾ ತಯಾರಿಗಳಾಗಿದ್ದವು. ಸಮ್ಮೇಳನದ ಪ್ರಚಾರಕ್ಕಾಗಿ ಚಳುವಳಿಗಾರರು ಬೇರೆ ಬೇರೆ ಸ್ಥಳಗಳಿಂದ ಆಗಮಿಸಿದ್ದರು. ಇವರೆಲ್ಲರೂ ಪೋಲಿಸರ ಕಣ್ಣು ತಪ್ಪಿಸಿ ಪ್ರಚಾರ ಮಾಡುವುದು, ಕರ ಪತ್ರ ಹಂಚುವುದನ್ನು ಮಾಡಬೇಕಿತ್ತು. ಇಲ್ಲಿ ಭಾಗವಹಿಸಿದ ಚಳುವಳಿಗಾರರಲ್ಲಿ ಮಹಿಳೆಯರು ಬಹು ಮುಖ್ಯವಾದ ಪಾತ್ರ ವಹಿಸಿದ್ದರು. ಇವರಲ್ಲಿ ಪ್ರಮುಖರೆಂದರೆ ಘೋರ್ಕರ್ಸಿಬಾಯಿ, ಚಂಪಾಬಾಯಿ, ವೆಂಕವ್ವಾ ಕಾಟಾಪುರ, ವೆಂಕೂಬಾಯಿ ಪಾರ್ವತಿ, ಸುಭದ್ರಾಬಾಯಿ ಮುಂತಾದ ಪ್ರಮುಖ ಮಹಿಳಾ ನಾಯಕರಾಗಿ ಭಾಗವಹಿಸಿದ್ದರು. ಈ ಸಮ್ಮೇಳನದ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸತ್ಯಾಗ್ರಹಿಗಳ ಬಂಧನವಾಯಿತು.

**ಚಂಪಾಬಾಯಿ**

ಚಾಪ್ಲಿಬಾಯಿಯವರ ಪತ್ನಿಯಾದ ಚಂಪಾಬಾಯಿಯವರು ಕರ್ನಾಟಕ ಪ್ರಾದೇಶಿಕ ರಾಜಕೀಯ ಪರಿಷತ್‌ನ ಪ್ರಚಾರಕ್ಕೆ ಮಂಗಳವೇಡೆಗೆ ಬಂದಿದ್ದ ಚಳುವಳಿಗಾರರಿಗೆ ಆಶ್ರಯ ನೀಡಿದರು[16]. ಇವರು ಭೂಗತರಾಗಿ ತಮ್ಮ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಿತ್ತು. ಭೂಗತರಾಗಿದ್ದಾಗ ಚಾಪ್ಲಿಬಾಯಿ ಮತ್ತು ಸಂಗಡಿಗರನ್ನು ಪೋಲಿಸರಿಂದ ಪರಾರಿ ಮಾಡಿದರು. ಶಿರೂರು ವೆಂಕಟೇಶ್ವರ ದೇವಾಲಯದಲ್ಲಿನ ಸ್ತ್ರೀಯರು ಇದೇ ಮಾದರಿಯಲ್ಲಿ ಚಳುವಳಿಗಾರರನ್ನು ಪರಾರಿ ಮಾಡಿದರು.

**ವೆಂಕವ್ವಾ ಕಾಟಾಪುರ**

ಬಾಗಲಕೋಟೆಯ 6ನೇ ಕರ್ನಾಟಕ ಪ್ರಾದೇಶಿಕ ರಾಜಕೀಯ ಪರಿಷತ್ ನಡೆದ ಸ್ಥಳದಲ್ಲಿ ಅಧ್ಯಕ್ಷರಾಗಿದ್ದ ರಾ.ಹ. ಪುರೋಹಿತ, ಸ್ವಾಗತಾಧ್ಯಕ್ಷರಾದ ಮಂಗಳವೇಡೆ ಮತ್ತು ಕೆರೂರು ಮುಂತಾದವರನ್ನು ಪೋಲಿಸರು ಬಂಧಿಸಿದರು. ಹೀಗೆ ಬಾಗಲಕೋಟೆಯಲ್ಲಿ 200ಕ್ಕೂ ಹೆಚ್ಚು ಜನ ಚಳುವಳಿಗಾರರು ಬಂಧಿತರಾಗಿದ್ದು, ಇವರೆಲ್ಲರಿಗೂ ವೆಂಕವ್ವಾ ಕಾಟಾಪುರ ಇವರು ಊಟದ ಸಂಪೂರ್ಣ ವ್ಯವಸ್ಥೆ ಮಾಡಿದರು[17]. ವೆಂಕವ್ವಾ ಒಬ್ಬ ವಿಧವೆಯಾಗಿದ್ದು, ಇವಳ ಪತಿಯು ಕೂಡಾ ರಾಷ್ಟ್ರೀಯ ಚಳುವಳಿಯಲ್ಲಿ ಹುತಾತ್ಮರಾಗಿದ್ದರು.

**ಇಂಚಗೇರಿ ಮಠದ ನೇತೃತ್ವದ ಹೋರಾಟದಲ್ಲಿ ಮಹಿಳೆಯರ ಪಾತ್ರ**

ಇಂಡಿ ತಾಲೂಕಿನ ಇಂಚಗೇರಿ ಮಠ ಒಂದು ನಾಥ ಪಂಥೀಯರ ಕೇಂದ್ರವಾಗಿತ್ತು. ಆದರೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಇದೊಂದು ಸ್ವಾತಂತ್ರ್ಯ ಹೋರಾಟಗಾರರ ಅಡಗು ತಾಣವಾಗಿತ್ತು. ಈ ಮಠದ ನೇತೃತ್ವದಲ್ಲಿ ಭೂಗತ ಚಳುವಳಿಗಳು ಮತ್ತು ಗಾಂಧೀಜಿಯವರ ನೇತೃತ್ವದ ಅಹಿಂಸಾ ಚಳುವಳಿಗಳನ್ನು ಸಕ್ರೀಯವಾಗಿ ಕೈಗೊಳ್ಳುತಿದ್ದರು. ಇಲ್ಲಿ ಪುರುಷ ಮಹಿಳೆ ಎಂಬ ಯಾವುದೇ ಬೇಧ ಭಾವವಿಲ್ಲದೇ ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸುತಿದ್ದರು.

ಇಂಚಗೇರಿಯ ಮಹಿಳಾ ಹೋರಾಟಗಾರರು ಮಲವಾಡಿ ಮತ್ತು ಸಿದ್ದವಾಡಿ ಮುಂತಾದ ಪ್ರದೇಶಗಳಿಂದ ೧ ಇಲ್ಲಿ ಉಳಿದು ಚಳುವಳಿಗಳಲ್ಲಿ ಭಾಗವಹಿಸುತಿದ್ದರು. ಇಲ್ಲಿನ ಹೋರಾಟಗಾರರಿಗೆ ಸೇನಾ ತರಬೇತಿಯನ್ನು ನೀಡಲಾಗುತಿತ್ತು. ಹಾಗೂ ಕೊಟ್ಟಲಗಿ (ಅಥಣಿ), ಅಸೂಟಿ (ಗದಗ) ಸೋನಿಹಾಳ (ಜತ್ತ)ಗಳಲ್ಲಿ ಮದ್ದು ಗುಂಡುಗಳನ್ನು ತಯಾರಿಸುವ ಕ್ರಾಂತಿಕಾರಿ ಚಟುವಟಿಕೆಗಳು ಮಹಾದೇವಪ್ಪನವರ ನೇತೃತ್ವದಲ್ಲಿ ನಡೆಯುತಿದ್ದವು[19]. ಜೊತೆಗೆ ಗಾಂಧೀಜಿಯವರ ಅಹಿಂಸಾ ಚಳುವಳಿಯನ್ನು ಕೂಡಾ ಆಚರಿಸುತಿದ್ದರು. ಗಾಂಧೀಜಿಯವರು ಚಳುವಳಿಯನ್ನು ಹಿಂಪಡೆದ ತಕ್ಷಣದಿಂದ ಭೂಗತ ಚಟುವಟಿಕೆಗಳನ್ನು ಪ್ರಾರಂಭಿಸುತಿದ್ದರು. ಇಲ್ಲಿನ ಮಹಿಳಾ ಹೋರಾಟಗಾರರು ಉತ್ತುವ–ಬಿತ್ತುವ ಕೆಲಸ ಹಾಗೂ ತಯಾರಿಸಿದ ಮದ್ದು–ಗುಂಡುಗಳನ್ನು ಭೂಗತರಾಗಿರುವ ಚಳುವಳಿಗಾರರ ಹತ್ತಿರಕ್ಕೆ ತಲುಪಿಸುವ ಕೆಲಸ ಮಾಡುತಿದ್ದರು[20].

**ಸೋನಿಹಾಳದ ಮಹಾದೇವಿ ಮಸಳಿ**

ಜೈಲು ವಾಸದ ಸಂದರ್ಭದಲ್ಲಿ ಅತ್ಯಾಚಾರಕ್ಕೆ ಒಳಗಾಗಿ ತವರು ಮನೆಯಿಂದ ತಿರಸ್ಕರಿಸಲ್ಪಟ್ಟು ಇಂಚಗೇರಿ ಮಠದಲ್ಲಿ

ಆಶ್ರಯ ಪಡೆದು ಇಲ್ಲಿಂದಲೇ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿದಳು. ಇವಳ ಜೊತೆಗಾರರಾಗಿ ವಿಜಯಪುರದ ಗಿರಿಜಾ ಕಲಗೊಂಡ (ಅಂಗಡಿ), ಮತ್ತು ಹೊಂಬಳದ ಈರಮ್ಮ ಪ್ರಮುಖ ಇಂಚಗೇರಿಯ ಮಹಿಳಾ ಹೋರಾಟಗಾರರಾಗಿದ್ದಾರೆ.

**ಸಮಾರೋಪ**

1919ರಲ್ಲಿ ರಾಷ್ಟ್ರೀಯ ಚಳುವಳಿಯಲ್ಲಿ ಪ್ರವೇಶ ಮಾಡಿದ ಗಾಂಧೀಜಿಯವರು ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಮಹಿಳೆಯರ ಸಹಭಾಗಿತ್ವಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ತಮ್ಮ ಭಾಷಣಗಳಲ್ಲಿ ಮಹಿಳೆಯರ ಸಾಮರ್ಥ್ಯದ ಕುರಿತು ಮಾತನಾಡುತ್ತಾ ಹೀಗೆ ಹೇಳುತ್ತಾರೆ, 'ಮಹಿಳೆ ಪುರುಷನಿಗಿಂತಲೂ ಅಹಿಂಸಾ ಮಾರ್ಗದಲ್ಲಿ ದಟ್ಟವಾದ ನಿರ್ಧಾರವನ್ನು ತೆಗೆದುಕೊಳ್ಳಬಲ್ಲಳು. ಆಕೆ ಪುರುಷನಿಗಿಂತ ಕಡಿಮೆ ಎನಿಸುವಂತಹ ಯಾವ ಸಂದರ್ಭಗಳು ಇಲ್ಲ. ಪುರುಷನಷ್ಟೇ ಸಮಾನವಾದ ಮಾನಸಿಕ ಸ್ಥೈರ್ಯವುಳ್ಳ ಮಹಿಳೆಯು ಪುರುಷನಿಗೆ ದೈವಿದತ್ತ ಕೊಡುಗೆ ಎನ್ನುತ್ತಾರೆ. ನೈತಿಕ ಶಕ್ತಿಯನ್ನು ಬಲವೆಂದು ಪರಿಗಣಿಸಿದರೆ ಮಹಿಳೆ ಖಂಡಿತವಾಗಿಯೂ ಪುರುಷನಿಗಿಂತಲೂ ಮೇಲುಸ್ತರದಲ್ಲಿ ಇರುತ್ತಾಳೆ ಎಂಬ ಗಾಂಧೀಜಿಯವರ ಮಾತಿನಂತೆ ವಿಜಯಪುರ ಜಿಲ್ಲೆಯ ಮಹಿಳಾ ಸ್ವಾತಂತ್ರ್ಯ ಹೋರಾಟಗರರು ಉಪವಾಸ ಸತ್ಯಾಗ್ರಹ, ಅಸಹಕಾರ ಚಳುವಳಿ, ವೈಯಕ್ತಿಕ ಸತ್ಯಾಗ್ರಹ, ಕಾನೂನು ಭಂಗ ಚಳುವಳಿ, ಅರಣ್ಯ ಸತ್ಯಾಗ್ರಹ, ಪಿಕೆಟಿಂಗ್ ಆಚರಿಸಿವುದು, ಕರ ನಿರಾಕರಣೆ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ, ಚಲೇಜಾವ್ ಚಳುವಳಿಗಳಲ್ಲಿ ಭಾಗವಹಿಸಿ ಭಾರತವನ್ನು ಬ್ರಿಟಿಷರ ಬಂಧನದಿಂದ ಮುಕ್ತಗೊಳಿಸುವಲ್ಲಿ ಯಶಸ್ವಿಯಾದರು.

**ಕೊನೆಟಿಪ್ಪಣಿಗಳು**

1. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ ಸಂಪುಟ 20, ಪು. 175.
2. ಶೇಕದಾರ ಎಸ್. ವಿಜಯಕುಮಾರ. (2006). *ವಿಜಯಪುರ ಜಿಲ್ಲೆಯ ದೇಸಗತಿಗಳು ಒಂದು ಅಧ್ಯಯನ.* (ಅಪ್ರಕಟಿತ ಸಂಶೋಧನ ಮಹಾಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ. ಪು. 337.
3. ಅದೇ. ಪು. 139.
4. ಅದೇ. ಪು. 140.
5. ಅದೇ. ಪು. 142.
6. Umapati K.L.(1992). *Role of the Bijapur District (Karnataka) in the Indian Freedom Struggle*, Karnataka University. (Unpublished PhD Theses), Pp.163.
7. ಅದೇ ಪು. 163.
8. ಮುನಿಸ್ವಾಮಿ ಆರ್. (ಸಂ.). (1999). *ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ* ***'ವಿಜಾಪುರ ಜಿಲ್ಲೆ'.*** ಅಭಿಮಾನಿ ಪ್ರಕಾಶನ. ಪು. 199.
9. Umapati K.L. (1992). ಪೂರ್ವೋಕ್ತ., Pp. 168.
10. ಕಾಮತ್ ಸುರ್ಯನಾಥ (ಸಂ.). (1974). *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ I,* ಗೀತಾ ಬುಕ್ ಹೌಸ್. ಪು. 1190.
11. Umapati K.L. (1992). ಪೂರ್ವೋಕ್ತ., Pp. 189.
12. ಮುನಿಸ್ವಾಮಿ ಆರ್. (ಸಂ.). (1999). ಪೂರ್ವೋಕ್ತ., ಪು. 190.
13. ಕಾಮತ್ ಸುರ್ಯನಾಥ (ಸಂ.). (1974). ಪೂರ್ವೋಕ್ತ., ಪು. 1198.
14. ಅದೇ. ಪು. 1198.
15. ಅದೇ. ಪು. 1206.
16. ಅದೇ. ಪು. 1213.
17. ಅದೇ. ಪು. 1218.
18. ಅದೇ. ಪು. 1270.
19. ಕಾಮತ್ ಸೂರ್ಯನಾಥ್. (ಸಂ.). (1995). *ಸ್ವಾತಂತ್ರ್ಯ ಹೋರಾಟದಲ್ಲಿ ಇಂಚಗೇರಿ ಪಾತ್ರ,* ***ಇಲ್ಲಿ.*** ಇತಿಹಾಸ ದರ್ಶನ ಸಂಪುಟ-10, ಕರ್ನಾಟಕ ಇತಿಹಾಸ ಅಕಾಡೆಮಿ, ಪು.234.
20. ಅದೇ ಪುಟ. 235.

**ಪರಾಮರ್ಶನ ಗ್ರಂಥಗಳು**


- ಸಮೀಉದ್ದೀನ್ ಆಬಿದಾ. (2017). *ಭಾರತದ ಸ್ವಾತಂತ್ರ್ಯ ಸಂಗಾಮಕ್ಕೆ ಮುಸ್ಲಿಂ ಮಹಿಳೆಯರ ಕೊಡುಗೆ.* ನವಕರ್ನಾಟಕ ಪಬ್ಲಿಕೇಶನ್ಸ್.
- Satyan, B.N. (1966). *Mysore State Gazetteer Bijjapur District*, Government Press.
- Puttaraju K. (2015). Leading A Movement towards Freedom: The Leaders who Leads Karnataka to Unification and Independence, *International Journal of Academic Research*, 2(2).
- Minch. I. Mallikarjun. (2013). Freedom Struggle in Karnataka: Role of Women Freedom Fighters, *Research Journal Humanities and Social Sciences*. 4(3). 289-292